ಹಣ ಸರ್ಕಾರಕ್ಕೆ ಬರಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಅಧಿಕಾರಿಗಳು ಗುತ್ತಿಗೆದಾರರ ಜೊತೆಯಲ್ಲಿ ಶಾಮೀಲಾಗಬಹುದು. ಐದು ವರ್ಷಗಳವರೆಗೆ ಒಬ್ಬರಿಗೆ ಗುತ್ತಿಗೆ ಕೊಡುವುದಾಗಿ ತಾವು ಹೇಳಿದ್ದೀರಿ. ಕೇವಲ ಒಂದೂವರೆ ಸಾವಿರ ರೂಪಾಯಿಗಳಿಗೆ ಒಬ್ಬನಿಗೆ ಒಂದು ಜಾಗವನ್ನು ಐದು ವರ್ಷಕ್ಕೆ ತಾವು ಗುತ್ತಿಗೆ ಕೊಡುತ್ತೀದ್ದೀರಿ. ಸನ್ಮಾನ್ಯ ಮಂತ್ರಿಗಳು ಹೇಳಿದಂತೆ ಒಬ್ಬ ಗುತ್ತಿಗೆದಾರ ಒಂದೂವರೆ ಸಾವಿರ ರೂಪಾಯಿಗಳು ಕೊಟ್ಟು ಪರ್ಮಿಷನ್ ತೆಗೆದುಕೊಂಡರೆ ಅವನು ಐದು ವರ್ಷಗಳವರೆಗೆ ಆ ಏರಿಯಾದಲ್ಲಿ ಮರಳು ತೆಗೆಯಬಹುದು. ಅಂದರೆ ಐದು ವರ್ಷಕ್ಕೆ ಅವನಿಗೆ ಎಷ್ಟು ದುಡ್ಡು ಬರುತ್ತದೆ? ಎಂಬುದನ್ನು ನಾವು ಲೆಕ್ಕ ಹಾಕಬಹುದಾಗಿದೆ. ಗ್ರಾನೈಟ್ ಲಾಬಿ, ಲಿಕ್ಕರ್ ಲಾಬಿ, ಹೀಗೆ ಈ ಎಲ್ಲಾ ಲಾಬಿಗಳಿಗಿಂತ ಅತ್ಯಂತ ಪ್ರಬಲವಾಗಿರತಕ್ಕಂತಹ ಲಾಬಿ ಇದಾಗಿದೆ. ಇದರ ಬಗ್ಗೆ ಯಾರಿಗೂ ಅಷ್ಟಾಗಿ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಿಗೆ ನಾನು ಕೇಳುವುದಿಷ್ಟೆ. ಈ ರೀತಿ ಗುತ್ತಿಗೆ ಕೊಡುವ ಪದ್ಧತಿಯನ್ನು ತಕ್ಷಣ ನಿಲ್ಲಿಸಿ, ತಾವು ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡಿ ಎಲ್ಲೆಲ್ಲಿ ಮರಳು ತೆಗೆಯುವಂತಹ ಜಾಗಗಳಿವೆ ಎಂದು ಗುರುತಿಸಿ, ಆ ಜಾಗಗಳ ಗುತ್ತಿಗೆಯನ್ನು ಹರಾಜು ಮೂಲಕ ಕೊಡುವಂತಹ ವ್ಯವಸ್ಥೆ ಮಾಡಿದರೆ, ಅದರಿಂದ ಸರ್ಕಾರಕ್ಕೆ ಒಳ್ಳೆಯ ಆದಾಯ ಬರುತ್ತದೆ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಸಕಲೇಶಪುರದಿಂದ ಮರಳು ಕುಣಿಗಲ್ ಮತ್ತು ಮಡಿಕೇರಿಗಳಿಗೂ ಹೋಗುತ್ತದೆ.

ಶ್ರೀ ಎಸ್.ಡಿ. ಜಯರಾಂ : ತಾವು ಸಲಹೆ ನೀಡಿದಂತೆ ಮಾಡುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಬೇಡಿಕೆಗಳ ಮಂಡನೆ.

ಬೇಡಿಕೆ ಸಂಖ್ಯೆ 11 - ಉನ್ನತ ಶಿಕ್ಷಣ

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,27,47,04,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ 14 - ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,35,45,96,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಯು.ಕೆ.ಪಿ. ಬಗೆಗಿನ ಚರ್ಚೆಯನ್ನು ಈಗ ತೆಗೆದುಕೊಳ್ಳುತ್ತೀರೋ ಅಥವಾ ನಾಳೆ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ನಾಳೆ ಚರ್ಚೆ ಮಾಡಲು ಬಹಳ ವಿಷಯಗಳಿವೆ. ಈಗ ಮಾನ್ಯ ಸಿ.ಎಂ. ಲಿಂಗಪ್ಪನವರು ಶಿಕ್ಷಣ ಇಲಾಖೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡಲಿ. ಯು.ಕೆ.ಪಿ. ಬಗ್ಗೆ ಅನಂತರ ತೆಗೆದುಕೊಳ್ಳೋಣ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಶಿಕ್ಷಣ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಗಿಂತ ಮೊದಲು ಯು.ಕೆ.ಪಿ. ವಿಷಯವನ್ನು ಚರ್ಚೆಗೆ ತೆಗೆದುಕೊಂಡಲ್ಲಿ ಅದನ್ನು ಅರ್ಧ ಗಂಟೆಯಲ್ಲಿ ಮುಗಿಸಬಹುದಾಗಿತ್ತು.

ಅಧ್ಯಕ್ಷರು : ಮಾನ್ಯ ಲಿಂಗಪ್ಪನವರು ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುವ ಸಲುವಾಗಿಯೇ ಮಧ್ಯಾಹ್ನದಿಂದ ಕಾದು ಕುಳಿತಿದ್ದಾರೆ. ಅವರು ಈಗ ಬೇಡಿಕೆಗಳ ಮೇಲಿನ ಚರ್ಚೆಯನ್ನು ಇನಿಷಿಯೇಟ್ ಮಾಡಲಿ. ನಂತರ ಯು.ಕೆ.ಪಿ. ವಿಷಯ ಚರ್ಚೆಗೆ ತೆಗೆದುಕೊಳ್ಳೋಣ. ಮಾನ್ಯ ನಾಗೇಗೌಡರು ಸ್ವಲ್ಪ ತಡವಾದರೂ ಸದನದಲ್ಲೇ ಇರಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಆಯಿತು, ನಾನು ಸದನದಲ್ಲೇ ಇರುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೇ, 1997-98ನೇ ಸಾಲಿನ.

ಶ್ರೀ ಬಿ.ಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಬೇಡಿಕೆ ಮೇಲಿನ ಚರ್ಚೆಯ ನಂತರ ಯು.ಕೆ.ಪಿ. ವಿಷಯ ಚರ್ಚೆಗೆ ತೆಗೆದುಕೊಳ್ಳುವುದಾದರೆ ಅದರ ಮೇಲಿನ ಚರ್ಚೆಯ ವರದಿಯನ್ನು ನಮ್ಮ ಪತ್ರಕರ್ತರು ಮಿತ್ರರು ವಿವರವಾಗಿ ತಮ್ಮ ಪತ್ರಿಕೆಗಳಿಗೆ ನೀಡುವುದಕ್ಕಾಗುವುದಿಲ್ಲ. ಇದರಿಂದ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಅನೇಕ ವಿಷಯಗಳು ಇರುವುದರಿಂದ ಅವುಗಳ ಬಗ್ಗೆ ಪ್ರಮುಖರೆಲ್ಲರೂ ಮಾತನಾಡಬೇಕಾಗುತ್ತದೆ. ಆದ್ದರಿಂದ ತಾವು ಈಗಲೇ ಯು.ಕೆ.ಪಿ. ವಿಷಯ ಚರ್ಚೆಗೆ ತೆಗೆದುಕೊಂಡರೆ ಅದನ್ನು 1-1$^{1}/_{2}$ ಗಂಟೆಯಲ್ಲಿ ಅಥವಾ ತಾವು ಎಷ್ಟು ಸಮಯ ಕೊಡುತ್ತೀರೋ ಅಷ್ಟು ಸಮಯದಲ್ಲಿ ಮುಗಿಸಬಹುದು.

ಅಧ್ಯಕ್ಷರು : ಆಗಲೇ ಮಾನ್ಯ ಉನ್ನತ ಶಿಕ್ಷಣ ಸಚಿವರು ಒಂದು ಮಾತು ಹೇಳಿದರು, ಅದರ ಬಗ್ಗೆಯೂ ನಾಳೆ ಚರ್ಚೆಗೆ ತೆಗೆದುಕೊಳ್ಳುವವರಿದ್ದೇವೆ ಹಾಗೆಯೇ ಇನ್ನೊಂದು ಯಾವುದೋ ವಿಚಾರ ಇದೆ, ಅದನ್ನೂ ಕೂಡ ನಾಳೆಗೆ ತೆಗೆದುಕೊಂಡಿದ್ದೇವೆ. ಎಲ್ಲಾ ನಾಳೆಗೆ ಎಂದರೆ ಟೈಮ್ ಅಡ್ಜಸ್ಟ್ ಆಗುವುದಿಲ್ಲ. ಯು.ಕೆ.ಪಿ. ವಿಷಯ ನಂತರ ತೆಗೆದು ಕೊಳ್ಳೋಣ. ನಾನು ಹತ್ತು ನಿಮಿಷದಲ್ಲಿ ಬರುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು : ಮಾನ್ಯ ಲಿಂಗಪ್ಪನವರೇ, ತಾವು ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಯನ್ನು ಆರಂಭಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ದಿವಸ ಬಹಳ ಗಂಭೀರವಾದಂತಹ ಚರ್ಚೆಯಾದ ಬಗ್ಗೆ.

ಉಪಾಧ್ಯಕ್ಷರು : ಮಾನ್ಯ ಅಧ್ಯಕ್ಷರು ಲಿಂಗಪ್ಪನವರಿಗೆ ಮಾತನಾಡಲು ಸೂಚಿಸಿ ಹೋಗಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಮಂಡ್ಯ ಜಿಲ್ಲೆಯಲ್ಲಿ 8 - 10 ದಿವಸಗಳಿಂದ ಓರ್ವ ಹೆಣ್ಣುಮಗಳು ಉಪವಾಸ ಮಾಡುತ್ತಿರುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ನಿಮಿಷದ ಮೇಲೆ ಜಾಸ್ತಿ ತೆಗೆದುಕೊಳ್ಳುವುದಿಲ್ಲ. ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿರತಕ್ಕಂತಹ ಓರ್ವ ಹೆಣ್ಣುಮಗಳ ಬಗ್ಗೆ ನಾನು ನಿನ್ನೆ ದಿವಸ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಆ ಬಗ್ಗೆ ಬೆಳಿಗ್ಗೆಯೇ ಸರ್ಕಾರದಿಂದ ಉತ್ತರ ಕೊಡಲಾಗುತ್ತದೆ ಎಂದು ಹೇಳಿದ್ದರೂ ಇದುವರೆಗೂ ಆ ದಿಸೆಯಲ್ಲಿ ಮಾಹಿತಿಯನ್ನು ಇನ್ನೂ ಪಡೆದಿಲ್ಲ. ಆದ್ದರಿಂದ ಉತ್ತರ ನೀಡುವುದು ಲೇಟಾಗುತ್ತಿದೆ. 8-10 ದಿವಸಗಳಿಂದ ಉಪವಾಸ ಮಾಡುತ್ತಿರುವ ಹೆಣ್ಣುಮಗಳ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೇ? ಇಷ್ಟೊಂದು ಸರ್ಕಾರದ ಅಧಿಕಾರಿಗಳಿದ್ದರೂ, ಬೇಗನೇ ಮಾಹಿತಿ ತಿರಿಸುವ ಸಾಮರ್ಥ್ಯವಿದ್ದರೂ ಉತ್ತರ ನೀಡಲು ಇನ್ನೂ ಕಾಲಾವಕಾಶ ಬೇಕು ಎಂದರೆ ಆ ಹೆಣ್ಣುಮಗಳ ಗತಿ ಏನು?

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಆ ಬಗ್ಗೆ ಈಗ ಹೇಳುತ್ತಾರೆ.

ಶ್ರೀ ಆರ್. ರೋಷನ್ ಬೇಗ್ (ರಾಜ್ಯ ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ಕೇಸ್ ಬಗ್ಗೆ ಈಗಾಗಲೇ ಮಂಡ್ಯ ಎಸ್.ಪಿ. ಮತ್ತು ಡಿ.ಐ.ಜಿ. ಜೊತೆಯಲ್ಲಿ ಮಾತನಾಡಲಾಗಿದೆ. ಅವರು ಎಲ್ಲಾ ಮಾಹಿತಿ ತರಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ. ಉತ್ತರ ಲೇಟಾಗಿದ್ದೂ ಕೂಡ ಏಕೆಂದು ನಾನು ಹೇಳುತ್ತೇನೆ. ಈಗ ಯಾರು ಹೆಣ್ಣುಮಗಳು ಉಪವಾಸ ಮಾಡುತ್ತಿದ್ದಾರೋ ಅವರೇ ಪೋಲೀಸರ ಹತ್ತಿರ ಬಂದು ಏನೂ ಲೀಗಲ್ ಕೇಸ್ ತೆಗೆದುಕೊಳ್ಳಬೇಡಿ. ಅವನನ್ನು ಅರೆಸ್ಟ್ ಮಾಡಬೇಡಿ, ಆ ರೀತಿ